ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 13-06-2017

ಪಾಟೀಸವಾಲುಃ- ಶ್ರೀ ಎಎಸ್‌ಎನ್‌ಎಚ್ ವಕೀಲರಿಂದ ವಾದಿ ಪರವಾಗಿ,

ಮೀರಾ ಮೈಜುದ್ದಿನ್ ಪಿರ್ಜಾದೆ ಮತ್ತು ಅವರು ಮಕ್ಕಳು ಹಾಗೂ ಬಿಬಿ ಆಯಿಷಾ ಇವರು ಈ ದಾವೆ ಮಾಡಿರುತ್ತಾರೆ. ಮೇಲೆ ಹೇಳಿದವರನ್ನು ಬಿಟ್ಟು ಬೇರೆ ಯಾರೂ ಈ ದಾವೆಯನ್ನು ಮಾಡಿರುವುದಿಲ್ಲ. ನಾನು 4 ಎಕರೆ ಜಮೀನನ್ನು 2ನೇ ಪ್ರತಿವಾದಿಯಿಂದ ಖರೀದಿ ಮಾಡಿರುತ್ತೇನೆ. ಆದರೆ ಅವರ ಅಣ್ಣತಮ್ಮಂದಿರ ನಡುವೆ ವಿವಾದ ಇರುವುದು ನನಗೆ ಗೊತ್ತಿರಲಿಲ್ಲ, ಅವರ ಅಣ್ಣತಮ್ಮಂದಿರಲ್ಲಿ ಯಾವ ವಿವಾದವಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು 4 ಎಕರೆ ಜಮೀನನ್ನು ಕ್ರಯಕ್ಕೆ ಪಡೆದ ಸಮಯದಲ್ಲಿ ಅಣ್ಣ-ತಮ್ಮಂದಿರ ವಿವಾದದ ಬಗ್ಗೆ ವಿಚಾರಿಸಲು ಹೋಗಿರುವುದಿಲ್ಲ. ನಾನು 2ನೇ ಪ್ರತಿವಾದಿ ಫಕ್ಕಿಯಿಂದ 4 ಎಕರೆ ಜಮೀನನ್ನು ಖರೀದಿ ಮಾಡಬೇಕಾದರೆ ಅವರಿಗೆ ಯಾವ ಹಕ್ಕು ಇದೆ ಎಂದು ವಿಚಾರಣೆ ಮಾಡಿರುವುದಿಲ್ಲ. 2ನೇ ಪ್ರತಿವಾದಿ ತನಗೆ ಹಕ್ಕು ಇರುತ್ತದೆ ಎಂದು ಹೇಳಿದ್ದರಿಂದ ನಾನು ನಂಬಿ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ನಾನು ಅವರು ಹೇಳಿದ ಮೇರೆಗೆ ಅವರಿಗೆ ಹಕ್ಕು ಇದೆ ಎಂದು ಹೇಳಿ ಖರೀದಿ ಮಾಡಿದ್ದು ಅದನ್ನು ಪರಿಶೀಲನೆ ಮಾಡಲು ಹೋಗಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಾಖಲೆಗಳನ್ನು ವಕೀಲರಿಗೆ ನೀಡಿ ಅವರ ಸಲಹೆ ಮೇರೆಗೆ ಖರೀದಿ ಮಾಡಿರುತ್ತೇನೆ. 2ನೇ ಪ್ರತಿವಾದಿಗೆ 4 ಎಕರೆ ಜಮೀನಿನ ಹಕ್ಕು ಹೇಗೆ ಬಂತು ಎಂದರೆ ಅದು ಅವರ ತಾಯಿಯ ಆಸ್ತಿಯಾಗಿದ್ದು ಅವರ ತಾಯಿ 2ನೇ ಪ್ರತಿವಾದಿಗೆ ಆಸ್ತಿಯನ್ನು ವರ್ಗಾವಣೆ ಮಾಡಿಕೊಟ್ಟಿರುತ್ತಾರೆ. 2ನೇ ಪ್ರತಿವಾದಿಗೆ ದಾನಪತ್ರದ ಮುಖಾಂತರ ಆಸ್ತಿ ಬಂದಿದ್ದು ಅದು ಯಾವಾಗ ಆಗಿರುತ್ತದೆ ಎಂದು ಈಗ ಹೇಳಲು ನನಗೆ ನೆನಪಿರುವುದಿಲ್ಲ. ನಾನು ಸದ್ರಿ ದಾನಪತ್ರವನ್ನು ನೋಡಿರುವುದಿಲ್ಲ. ದಾನಪತ್ರ ಯಾವಾಗ, ಎಲ್ಲಿ ಆಗಿರುತ್ತದೆ ಮತ್ತು ಯಾರ್ಯಾರು ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. 2ನೇ ಪ್ರತಿವಾದಿಯ ತಾಯಿಗೆ ಹಕ್ಕು ಹೇಗೆ ಬಂತು ಎಂದರೆ ಸಾಕ್ಷಿಯು ಅದು ಅವರ ಸ್ವಂತ ಆಸ್ತಿ ಎಂದು ಹೇಳಿರುತ್ತಾರೆ. ನಾನು 4 ಎಕರೆ ಜಮೀನು 2ನೇ ಪ್ರತಿವಾದಿಯ ತಾಯಿಯ ಸ್ವಂತ ಆಸ್ತಿ ಹೇಗೆ ಎಂಬುದರ ಬಗ್ಗೆ ಪರಿಶೀಲಿಸಿ ನೋಡಿರುವುದಿಲ್ಲ. ಸದ್ರಿ 4 ಎಕರೆ ಜಮೀನು 2ನೇ ಪ್ರತಿವಾದಿಯ ತಾಯಿಗೆ ಯಾವಾಗ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಮೇಲೆ ವಾದಿಗಳಿಗೆ ಎಂದೂ ಹಕ್ಕು ಇರಲಿಲ್ಲ, ಕೇವಲ ಅದು 2ನೇ ಪ್ರತಿವಾದಿಯ ತಾಯಿಗೆ ಮಾತ್ರ ಹಕ್ಕು ಇತ್ತು ಎಂದು ಹೇಳುತ್ತೇನೆ. ದಾವಾ ಸ್ವತ್ತು 2ನೇ ಪ್ರತಿವಾದಿಯ ತಾಯಿಯ ಹಕ್ಕಿನ ಆಸ್ತಿ ಆಗಿರುವುದಿಲ್ಲ, ಅದು ವಾದಿಗಳ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ.

ನಾನು 2014 ನೇ ಇಸ್ವಿಯಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ, ಆದರೆ ದಿನಾಂಕ ಮತ್ತು ತಿಂಗಳು ನೆನಪಿರುವುದಿಲ್ಲ, ಕ್ರಯಪತ್ರವನ್ನು ಗೋಮ್ಸ್

ವಕೀಲರವರು ಬರೆದಿರುತ್ತಾರೆ. ಕ್ರಯಪತ್ರವನ್ನು ಗೋಮ್ಸ್ ವಕೀಲರ ಕಚೇರಿಯಲ್ಲಿ ಬರೆದಿರುತ್ತಾರೆ. ಕ್ರಯಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನಾನು ಕೊಟ್ಟ ಮಾಹಿತಿಯ ಮೇರೆಗೆ ಗೋಮ್ಸ್ ವಕೀಲರವರು ಕ್ರಯಪತ್ರವನ್ನು ತಯಾರಿಸಿರುತ್ತಾರೆ ಎಂದರೆ ಸರಿ. ಕ್ರಯಪತ್ರವನ್ನು ತಯಾರಿಸಿದ ಸಮಯದಲ್ಲಿ 2ನೇ ಪ್ರತಿವಾದಿ, 2ನೇ ಪ್ರತಿವಾದಿಯ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರೆಲ್ಲರೂ ಬಂದಿದ್ದರು. ಇವರ ಜೊತೆಗೆ ಉಳಿದ ಪ್ರತಿವಾದಿಗಳೂ ಸಹ ಆ ಸಮಯದಲ್ಲಿ ಹಾಜರಿದ್ದರು. 2 ರಿಂದ 10 ರ ವರೆಗಿನ ಪ್ರತಿವಾದಿಗಳು ಹಾಗೂ 2ನೇ ಪ್ರತಿವಾದಿಯ ಅಣ್ಣ-ತಮ್ಮಂದಿರು ಮತ್ತು ಅಕ್ಕತಂಗಿಯರು ಎಲ್ಲರೂ ಸೇರಿ ಕ್ರಯಪತ್ರವನ್ನು ನನಗೆ ಬರೆದು ಕೊಟ್ಟಿರುತ್ತಾರೆ. 2ನೇ ಪ್ರತಿವಾದಿ ಫಕ್ಕಿಯವರು ಮಾತ್ರ ಕ್ರಯಪತ್ರಕ್ಕೆ ಸಹಿ ಮಾಡಿರುತ್ತಾರೆ, ಉಳಿದವರು ಯಾರೂ ಸಹಿ ಮಾಡಿರುವುದಿಲ್ಲ. ಭಟ್ಕಳದ ಉಪ ನೊಂದಣಿ ಕಚೇರಿಯಲ್ಲಿ ನೋಂದಣಿಯಾಗಿರುತ್ತದೆ. 2ನೇ ಪ್ರತಿವಾದಿಯ ಅಣ್ಣ ತಮ್ಮಂದಿರು, ಅಕ್ಕತಂಗಿಯರು ಹಾಗೂ ಉಳಿದ ಪ್ರತಿವಾದಿಯರು ವಕೀಲರ ಕಚೇರಿಗೆ ಮಾತ್ರ ಬಂದಿದ್ದರು, ಉಪ ನೋಂದಣಿ ಕಚೇರಿಗೆ ಬಂದಿರಲಿಲ್ಲ. 2ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆಯವರು ಯಾರೂ ದಾಖಲೆಗೆ ಸಹಿ ಮಾಡಿರುವುದಿಲ್ಲ. ನಾನು ಒಟ್ಟಾಗಿ ಜಾಲಿ ಗ್ರಾಮದ 4 ಎಕರೆ ಜಮೀನನ್ನು ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿದ 4 ಎಕರೆ ಜಮೀನಿನ ಚತುರ್ಗಡಿಯನ್ನು ಹೇಳಲು ಆಗುವುದಿಲ್ಲ. ನಾನು ಖರೀದಿ ಮಾಡಿದ ಜಮೀನಿನಲ್ಲಿ ತೆಂಗಿನ ಮರ, ಕಾಡು ಜಾತಿಯ ಮರ, ಅರ್ಧ ಕಟ್ಟಿದ ಮನೆ ಮಾತ್ರ ಇದ್ದು ಬೇರೆ ಏನೂ ಇರುವುದಿಲ್ಲ. ನಾನು ರೂ. 17,52,000-00 ಕ್ಕೆ ಖರೀದಿ ಮಾಡಿರುತ್ತೇನೆ. ನಾನು ಕಾಂಟ್ರಾಕ್ಟ್ ಕೆಲಸ ಮಾಡುತ್ತೇನೆ. ಆದರೆ ಲೈಸನ್ಸ್ ಇರುವುದಿಲ್ಲ. 2ನೇ ಪ್ರತಿವಾದಿ ನನ್ನ ಸ್ನೇಹಿತರಲ್ಲ, ಆದರೆ ಒಂದೇ ಕೇರಿಯಲ್ಲಿ ಇರುತ್ತೇವೆ. ನಾನು 2ನೇ ಪ್ರತಿವಾದಿ ಹಾಗೂ ಇತರೇ ಪ್ರತಿವಾದಿಗಳು ಸೇರಿ ಮೋಸದ ದಾಖಲೆಗಳನ್ನು ಸೃಷ್ಟಿ ಮಾಡುವ ಕೆಲಸವನ್ನು ಮಾಡುತ್ತೇವೆ ಎಂದರೆ ಸರಿಯಲ್ಲ. ನಾನು ಗೋಮ್ಸ್ ವಕೀಲರ ಕಚೇರಿಯಲ್ಲಿ ರೂ. 7,52,000-00 ವನ್ನು ನಗದು ರೂಪದಲ್ಲಿ 2ನೇ ಪ್ರತಿವಾದಿ ಫಕ್ಕಿ ರವರಿಗೆ ಕೊಟ್ಟಿರುತ್ತೇನೆ. ಉಳಿದ ಹಣವನ್ನು ಚೆಕ್ಕಿನ ರೂಪದಲ್ಲಿ 2ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ. ನಾನು ಸಂಪೂರ್ಣ ಕ್ರಯದ ಮೊತ್ತವನ್ನು 2ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ. ನನ್ನ ಸ್ನೇಹಿತರ ಬಳಿ ಕೈಗಡ ಸಾಲವನ್ನು ಪಡೆದುಕೊಂಡು ಹಣವನ್ನು 2ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ. ನಾನು ಯಾವ ಯಾವ ಸ್ನೇಹಿತರಿಂದ ಎಷ್ಟೆಷ್ಟು ಹಣ ಮತ್ತು ಯಾವ ಯಾವ ದಿನಾಂಕದಂದು ತೆಗೆದುಕೊಂಡಿರುತ್ತೇನೆ ಎಂದು ಈಗ ಹೇಳಲು ನೆನಪಿಲ್ಲ. ನಾನು ನನ್ನ ಸ್ನೇಹಿತರ ಬಳಿ ಹಣವನ್ನು ಪಡೆದುಕೊಂಡ ಬಗ್ಗೆ ಬರೆದಿಟ್ಟುಕೊಂಡಿರುತ್ತೇನೆ. ನಾನು ಹಣವನ್ನು ಪಡೆದುಕೊಂಡ ಬಗ್ಗೆ ಬರೆದಿಟ್ಟಿದಂತಹ ದಾಖಲೆಯನ್ನು ಈ ದಿವಸ ನ್ಯಾಯಾಲಯಕ್ಕೆ ಬರಬೇಕಾದರೆ ನೋಡಿಕೊಂಡು ಬಂದಿರುವುದಿಲ್ಲ ಮತ್ತು ಅದನ್ನು ತಂದಿರುವುದಿಲ್ಲ. ನಾನು ಏಕೆ ಅದನ್ನು ಈ ದಿವಸ ನೋಡಿಕೊಂಡು ಬಂದಿರುವುದಿಲ್ಲ ಎಂದರೆ ಅಂತಹ ದಾಖಲೆ ಇರುವುದಿಲ್ಲ ಎಂದರೆ

ಸರಿಯಲ್ಲ. ನಾನು ದೊಡ್ಡ ಕಾಂಟ್ರಾಕ್ಟರ್ ಆಗಿರುವುದಿಲ್ಲ, ಸಣ್ಣ ಪುಟ್ಟ ಕಾಂಟ್ರಾಕ್ಟರ್ ಆಗಿದ್ದು ಕಂಪೌಂಡ್ ಮತ್ತು ಮನೆ ಕಟ್ಟುವ ಕೆಲಸ ಮಾಡುತ್ತೇನೆ. ನಾನು ಬೇರೆಯವರ ಮನೆಯನ್ನು ಕಟ್ಟಿಸಿರುತ್ತೇನೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುತ್ತದೆ. ನನಗೆ ಯಾವುದೇ ಉದ್ಯೋಗ ಇರುವುದಿಲ್ಲ, ಕೇವಲ ಪ್ರತಿವಾದಿಗಳ ಜೊತೆಯಲ್ಲಿ ಸೇರಿಕೊಂಡು ಈ ರೀತಿಯಾದ ಕೆಲಸವನ್ನು ಮಾಡುತ್ತೇನೆ ಮತ್ತು ನಾನು ಕಾಂಟ್ರಾಕ್ಟ್ ಕೆಲಸ ಮಾಡುತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಾಂಟ್ರಾಕ್ಟ್ ಕೆಲಸದ ಬಗ್ಗೆ ಬಂದಂತಹ ಆದಾಯ ಮತ್ತು ಖರ್ಚಿನ ಬಗ್ಗೆ ಲೆಕ್ಕ ಇಟ್ಟಿರುವುದಿಲ್ಲ. ಆಡಿಟ್ ಮಾಡುವಂತಹ ಅಕೌಂಟ್ ನನ್ನ ಬಳಿ ಇರುವುದಿಲ್ಲ, ಆದರೆ ನಾನೇ ಬರೆದಿರುತ್ತೇನೆ. ನಾನು ಯಾವುದೇ ಲೆಕ್ಕವನ್ನು ಬರೆದಿಟ್ಟಿರುವುದಿಲ್ಲ, ನಾನು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಲೆಕ್ಕ ಬರೆದಿಡುವಷ್ಟು ವ್ಯವಹಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವರ್ಷಕ್ಕೆ ಎಷ್ಟು ಆದಾಯ ಸಂಪಾದನೆ ಮಾಡುತ್ತೇನೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡಿರುವುದಿಲ್ಲ. ನಾನು ಕಾಂಟ್ರಾಕ್ಟ್ ಕೆಲಸಕ್ಕೆ ಸಂಬಂಧಪಟ್ಟಂತೆ ಅಂಗಡಿಗಳಲ್ಲಿ ಸಾಮಾನು ಖರೀದಿ ಮಾಡಿದ ಬಗ್ಗೆ ಬಿಲ್ ಇರುತ್ತದೆ. ಈ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನಗೆ ರೂ. 17,52,000-00 ಹಣವನ್ನು ಕೊಟ್ಟು ದಾವಾ ಸ್ವತ್ತನ್ನು ಖರೀದಿ ಮಾಡುವ ಸಾಮರ್ಥ್ಯ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಕಾಣಿಸಿರುವ ಕ್ರಯದ ಮೊತ್ತ ಕೇವಲ ಕಾಲ್ಪನಿಕ ಮತ್ತು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಭಟ್ಕಳದ ಎಕ್ಸಿಸ್ ಬ್ಯಾಂಕಿನ ಚೆಕ್ಕನ್ನು ಕೊಟ್ಟಿರುತ್ತೇನೆ. ನನ್ನ ಬಳಿ ಎಕ್ಸ್‌ಸ್ ಬ್ಯಾಂಕ್‌ನ ಪಾಸ್ ಪುಸ್ತಕ ಇರುತ್ತದೆ ಮತ್ತು ನಾನು 2ನೇ ಪ್ರತಿವಾದಿಗೆ ನೀಡಿದ ಚೆಕ್ಕು ನಗದೀಕರಣ ಆದ ಬಗ್ಗೆ ನಮೂದು ಆಗಿರುತ್ತದೆ. ನನ್ನ ಬಳಿ ಅಂತಹ ಪಾಸ್‌ಬುಕ್ ಇಲ್ಲದೇ ಇರುವುದರಿಂದ ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ನಾನು ನಮೂದು ಮಾಡಿರುವ ಚೆಕ್ ಹಾಳೆಯ ನಂಬರ್ ಬ್ಯಾಂಕ್‌ನವರು ನನಗೆ ಕೊಟ್ಟೇ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಕ್ರಯಪತ್ರದಲ್ಲಿ ಹೇಳಿರುವ ಚೆಕ್ ಸಂಖ್ಯೆಯಂತಹ ಚೆಕ್ ಬ್ಯಾಂಕಿನವರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ತೋರಿಕೆಯ ಮಟ್ಟಿಗೆ ಮಾತ್ರ ಕ್ರಯಪತ್ರದಲ್ಲಿ ಚೆಕ್ಕಿನ ಸಂಖ್ಯೆ ಮತ್ತು ಹಣವನ್ನು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಕ್ರಯಪತ್ರ ನೋಂದಣಿಯಾಗಬೇಕಾದರೆ ಹೊನ್ನಪ್ಪ ಜಟ್ಟಪ್ಪ ನಾಯ್ಕ ಮತ್ತು ಹುಸೇನ್ ಶಬ್ಬೀರ್ ರವರು ಸಾಕ್ಷಿದಾರರಾಗಿ ಹಾಜರಿದ್ದು ಸಹಿ ಮಾಡಿರುತ್ತಾರೆ. ಇಬ್ಬರೂ ಭಟ್ಕಳದವರಾಗಿದ್ದು ಜೀವಂತ ಇರುತ್ತಾರೆ. ಹೊನ್ನಪ್ಪ ಜಟ್ಟಪ್ಪ ನಾಯ್ಕ ನನ್ನ ಸ್ನೇಹಿತರಾಗಿದ್ದು, ಹುಸೇನ್ ಶಬ್ಬೀರ್‌ರವರನ್ನು 2ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. ಸದ್ರಿಯವರು 2ನೇ ಪ್ರತಿವಾದಿಯ ಸ್ನೇಹಿತರು ಎಂದರೆ ಸರಿ. ಮೇಲಿನ ಇಬ್ಬರೂ ಸಹ ಕ್ರಯಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ, ಬೇರೆಯವರನ್ನು

ಕರೆದುಕೊಂಡು ಬಂದು ಅವರ ಹೆಸರಿನಲ್ಲಿ ಸಹಿ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಕ್ರಯಪತ್ರವು ತೋರಿಕೆ ಮಟ್ಟದ್ದು, ಪ್ರತಿಫಲ ಇಲ್ಲದೇ ಇರತಕ್ಕಂತಹದ್ದು ಮತ್ತು ಮೋಸದ್ದು ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ತಾಯಿಗೆ ದಾವಾ ಸ್ವತ್ತಿನ ಮೇಲೆ ಹಕ್ಕು ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. 2ನೇ ಪ್ರತಿವಾದಿಯ ತಾಯಿ 2ನೇ ಪ್ರತಿವಾದಿಗೆ ಯಾವುದೇ ದಾನಪತ್ರವನ್ನು ಮಾಡಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಹೇಳಿರುವ ದಾನಪತ್ರಗಳೆಲ್ಲವೂ ಫೋರ್ಜರಿ ದಾಖಲೆಗಳು ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವ ದಾನಪತ್ರದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. 2ನೇ ಪ್ರತಿವಾದಿ ಮತ್ತು ಉಳಿದ ಪ್ರತಿವಾದಿಗಳಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯದಸ್ತವೇಜು ಜಾರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು 2ನೇ ಪ್ರತಿವಾದಿಯ ಜೊತೆಗೆ ಸೇರಿಕೊಂಡು ವಾದಿಗಳ ಗಮನಕ್ಕೆ ಬರದ ಹಾಗೆ ಅವರ ಬೆನ್ನ ಹಿಂದೆ ಆರ್‌ಟಿಸಿಗಳನ್ನು ಕಂದಾಯ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿ ನನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಈಗಲೂ ಸಹ ವಾದಿಗಳ ಸ್ವಾದೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನಾನು 2ನೇ ಪ್ರತಿವಾದಿ ಹಾಗೂ ಇತರೇ ಪ್ರತಿವಾದಿಗಳ ಒಳಸಂಚಿಗೆ ಸೇರಿ ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆ. ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.
ಸಹಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಭಟ್ಕಳ